# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಎಲ್.ಬಿ-1846/2016/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:27-10-2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಗ್ರಾಮ ಪಂಚಾಯತಿ ಮರಬ್ಬಿಹಾಳು ಇದರ ಸದಸ್ಯರ ಮಕ್ಕಳ ಹೆಸರಿನಲ್ಲಿ ಮನೆ ಮಂಜೂರು ಆಗಿರುವುದನ್ನು ರದ್ದುಪಡಿಸಲು ಸೂಕ್ತ ಕಾನೂನಿನ ಕ್ರಮ ತೆಗೆದುಕೊಳ್ಳುವ ಬಗ್ಗೆ.

****

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಹೊಸಪೇಟ್ ಲೋಕಾಯುಕ್ತ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ (1) ಶ್ರೀಮತಿ ಜಿ. ಗಂಗಮ್ಮ, ಅಧ್ಯಕ್ಷರು, ಮರಬಿಹಾಳ ಗ್ರಾಮ ಪಂಚಾಯತಿ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ (2) ಶ್ರೀ ವಸಂತರಾಜ್ ಅಬ್ರಾಹಂ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಮರಬ್ಬಿಹಾಳ ಗ್ರಾಮ ಪಂಚಾಯತಿ ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ (3) ಶ್ರೀಮತಿ ಟಿ. ಹನುಮವ್ವ ಸದಸ್ಯರು, ಮರಬಿಹಾಳ ಗ್ರಾಮ ಪಂಚಾಯತಿ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ (4) ಶ್ರೀ ಮಹಾದೇವ, ಖಾಸಗಿ ವ್ಯಕ್ತಿ ವರದಾಪುರ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲ್ಲೂಕು ಬಳ್ಳಾರಿ ಜಿಲ್ಲೆ ಮತ್ತು (5) ಶ್ರೀ ತೋಟಯ್ಯ, ಹಿಂದಿನ ಕಾರ್ಯದರ್ಶಿ ಮರಬಿಹಾಳ ಗ್ರಾಮ ಪಂಚಾಯತಿ ಮತ್ತು ಪ್ರಸ್ತುತ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತಂಬ್ರಹಳ್ಳಿ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಸ್ವಯಂ ಪ್ರೇರಿತ ದೂರು ಅಂತ ದಾಖಲಿಸಿಕೊಂಡು ಕರ್ನಾಟಕ ಲೋಕಾಯುಕ್ತ ಅಧಿನಿಯಮದಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ

2) ಪ್ರಕರಣದ ಸಂಕ್ಷಿಪ್ತ ಸಾರಾಂಶ :

ಈ ದೂರನ್ನು ಸ್ವಯಂ ಪ್ರೇರಿತ ದೂರು ಅಂತ ಪರಿಗಣನೆಗೆ ತೆಗೆದುಕೊಂಡು ಹೊಸಪೇಟೆ ಲೋಕಾಯುಕ್ತ ಪೊಲೀಸ್ ಠಾಣೆಯ ಮೊಕದ್ದಮೆ ನಂ:8/2014 ಅನ್ನು ಭ್ರಷ್ಟಾಚಾರ ತಡೆ ಕಾನೂನಿನ

ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು, ಎದುರುದಾರರ ವಿರುದ್ಧ ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಮತ್ತು ಅಂತಿಮ ವರದಿಯನ್ನು ತನಿಖಾಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

3) ಈ ಪ್ರಕರಣದಲ್ಲಿ 1, 3 ಮತ್ತು 4ನೇ ಎದುರುದಾರರು ಕ್ರಮವಾಗಿ ಅಧ್ಯಕ್ಷರು ಮರಬ್ಬಿಹಾಳು ಗ್ರಾಮ ಪಂಚಾಯ್ತಿ ಮತ್ತು ಸದಸ್ಯರು, ವ್ಯವಸಾಯ ಉದ್ಯೋಗದ ಖಾಸಗಿ ವ್ಯಕ್ತಿಯಾಗಿರುವುದರಿಂದ ಅವರ ವಿರುದ್ಧ ಪ್ರಕರಣವನ್ನು ಕೈಬಿಡಲಾಗಿದೆ.

4) 2ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆಗಿರುವುದರಿಂದ ಅವರ ವಿರುದ್ಧ ಮಾತ್ರ ದಾಖಲಿಸಿಕೊಳ್ಳಲಾಯಿತು. 2ನೇ ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಗಳನ್ನು ಕಳುಹಿಸಿ ಅವರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

5) 2ನೇ ಎದುರುದಾರರು ತಮ್ಮ ಆಕ್ಷೇಪಣೆ/ಪರಿವಿಕ್ಷಣಾ ಟಿಪ್ಪಣಿಯಲ್ಲಿ ಚಾರ್ಜ್ ಶೀಟ್‌ನ ಎಲ್ಲಾ ಅಂಶಗಳನ್ನು ಅಲ್ಲಗಳೆದಿದ್ದು ಪ್ರಸ್ತುತ ವಿಚಾರಣೆಯಲ್ಲಿರುವ ಗ್ರಾಮ ಪಂಚಾಯ್ತಿಯ ಸದಸ್ಯರ ಕುಟುಂಬದವರಿಗೆ ಇಂದಿರ ಆವಾಸ್ ಯೋಜನೆಯಡಿಯಲ್ಲಿ ಕಾನೂನಿನ ವಿರುದ್ಧವಾಗಿ ಮನೆಗಳನ್ನು ಹಂಚಿದ್ದಾರೆ ಎನ್ನುತ್ತಿರುವ ಸಮಯದಲ್ಲಿ ದಿ: 30.6.2011ರಂದು ತಾನು ರಜೆಯ ಮೇಲೆ ಇದ್ದೆನು. ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ.ಎಸ್.ಬಿ.ಹತ್ತಿ ಇವರು ನನಗೆ ಅನಾರೋಗ್ಯ ಇದ್ದ ನಿಮಿತ್ತ ದಿ: 28.6.2011ರಿಂದ 10.7.2011ರವರೆಗೆ 13 ದಿನಗಳು ಮತ್ತು ನಂತರ ದಿನಾಂಕ: 28.7.2011ರಿಂದ 4.8.2011ರವರೆಗೆ 8 ದಿನಗಳು ಹೀಗೆ ಒಟ್ಟು 21 ದಿನಗಳ ಪರಿವರ್ತಿತ ರಜೆಯನ್ನು ಮಂಜೂರು ಮಾಡಿದ್ದಾರೆ. ದಿನಾಂಕ: 30–6–2011 ರಂದು ಫಲಾನುಭವಿಗಳ ಆಯ್ಕೆ ಆಗಿರುತ್ತದೆ. ಆದ್ದರಿಂದ ತನ್ನ ವಿರುದ್ಧ ಪ್ರಕರಣವನ್ನು ಕೈಬಿಡುವಂತೆ ಕೋರಿಕೊಂಡಿದ್ದಾರೆ. 2ನೇ ಎದುರುದಾರರು ತಮ್ಮ ಆಕ್ಷೇಪಣೆಗಳೊಂದಿಗೆ ರಜೆ ಮಂಜೂರಾದ ಆದೇಶದ ಪ್ರತಿ ಮತ್ತು ಸಾಮಾನ್ಯ ಸಭೆಯ ನಿರ್ಣಯದ ನಕಲುಗಳನ್ನು ಸಲ್ಲಿಸಿದ್ದಾರೆ.

6) ಹೊಸಪೇಟೆ ಲೋಕಾಯುಕ್ತ ಪೊಲೀಸ್ ಠಾಣೆಯ ಮೊಕದ್ದಮೆ ನಂ:8/2014 ರ ಚಾರ್ಜ್ ಶೀಟ್‌ನಲ್ಲಿ 2ನೇ ಎದುರುದಾರರಾದ ಶ್ರೀ ವಸಂತ್ ರಾಜ್ ಇವರ ಮೇಲೆ ಮಾಡಿರುವ

Sd/-

ಆರೋಪವೇನೆಂದರೆ ಆಶ್ರಯ ಮನೆಗಳನ್ನು ಮಂಜೂರು ಮಾಡುವಾಗ ಪಂಚಾಯ್ತಿ ಸದಸ್ಯೆ ಶ್ರೀಮತಿ ಹನುಮವ್ವ ಇವರ ಮಕ್ಕಳ ಹೆಸರನ್ನು ಫಲಾನುಭವಿ ಅಂತ ಆಯ್ಕೆ ಮಾಡಿ ಅವರಿಗೆ ಮನೆ ನಿರ್ಮಿಸಲು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಅಂತಿಮ ವರದಿಯಲ್ಲಿ ಇಂದಿರಾ ಆವಾಸ್ ಯೋಜನೆಯಲ್ಲಿ 63 ಫಲನುಭವಿಗಳನ್ನು ಆಯ್ಕೆ ಮಾಡಿದ್ದು ಗ್ರಾಮ ಪಂಚಾಯ್ತಿ ಸದಸ್ಯರ ಮಕ್ಕಳು ಟಿ.ಉಮಾವತಿ, ಲಕ್ಷ್ಮವ್ವ, ಮತ್ತು ನಾಗರತ್ನ ಎನ್ನುವವರು ವರದಾಪುರ ಗ್ರಾಮದಲ್ಲಿ ವಾಸವಾಗಿ ಇರದೇ ಇದ್ದರೂ ಸಹ ಅನುಮೋದನೆ ಮಾಡಿದ್ದಾರೆ. ಫಲಾನುಭವಿಗಳ ಕಡತಕ್ಕೆ ಹಂತ ಹಂತವಾದ ಮನೆ ನಿರ್ಮಾಣದ ಫೋಟೋಗಳನ್ನು ಅಂಟಿಸಿ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಆಯ್ಕೆಯ ಸಮಯದಲ್ಲಿ ಪಿ.ಡಿ.ಓ., ರವರು ಹಾಜರಿದ್ದರು ಅಂತ ಅಭಿಪ್ರಾಯಪಡಲಾಗಿದೆ. ಆದರೆ ಸಾಮಾನ್ಯ ಸಭೆ ನಂ.7 ರ ನಡವಳಿಗಳನ್ನು ಪರಿಶೀಲಿಸಲಾಗಿ ಶ್ರೀ ಸಿ.ಎಂ.ತೋಟಯ್ಯ ಎನ್ನುವ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು, ಸದರಿ ನಡವಳಿಗೆ ಸಹಿ ಮಾಡಿರುವುದು ಕಂಡುಬಂದಿರುತ್ತದೆ. 2ನೇ ಎದುರುದಾರರು ದಿ: 30.6.2011ರಂದು ಸಾಮಾನ್ಯ ಸಭೆ ನಡೆಸಿದಾಗ ನಡವಳಿಗೆ ಸಹಿ ಮಾಡಿಲ್ಲ ಎನ್ನುವುದು ಸಾಬೀತಾಗುತ್ತದೆ. ಪಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ತಾನು ಇರಲಿಲ್ಲ ಅಂತ 2ನೇ ಎದುರುದಾರರು ಹೇಳುತ್ತಿರುವುದರಿಂದ ಮರಬ್ಬಿಹಾಳು ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಶ್ರೀ ಡಿ.ಎಂ.ತೋಟಯ್ಯ ಇವರನ್ನು ಈ ಪ್ರಕರಣದ 5ನೇ ಎದುರುದಾರರನ್ನಾಗಿ ಸೇರಿಸಿಕೊಂಡು ಅವರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

7) 5ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದು, ಪಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಗೆ ಇರುತ್ತದೆ. ಸಭೆಯಲ್ಲಿ ಹಾಜರಿದ್ದ ಸದಸ್ಯರು ಸರ್ವಾನುಮತದಿಂದ ಆಯ್ಕೆ ಮಾಡಿದ ಪಲಾನುಭವಿಗಳನ್ನು ನಡವಳಿಕೆಯಲ್ಲಿ ದಾಖಲಿಸಲಾಗಿದೆ. ಈ ವಿಷಯದಲ್ಲಿ ತಾನು ಯಾವುದೇ ಲೋಪ ಮಾಡಿರುವುದಿಲ್ಲ. ಆದ್ದರಿಂದ, ಈ ದೂರಿನಿಂದ ತಮ್ಮನ್ನು ಕೈಬಿಡುವಂತೆ ಕೋರಿಕೊಂಡಿದ್ದಾರೆ.

8) ಮರಬ್ಬಿಹಾಳು ಗ್ರಾಮ ಪಂಚಾಯತಿ ಸದಸ್ಯೆ ಶ್ರೀಮತಿ ಹನುಮವ್ವ ಇವರ ಮಕ್ಕಳ ಹೆಸರಿನಲ್ಲಿ ಮತ್ತು ಇಂದಿರಾ ಆವಾಸ ಯೋಜನೆಯ ಅಡಿಯಲ್ಲಿ ಪಂಚಾಯತಿ ಸದಸ್ಯರ ಮಕ್ಕಳಾದ ಟಿ.ಉಮಾವತಿ, ಲಕ್ಷ್ಮವ್ವ ಮತ್ತು ನಾಗರತ್ನ ವರದಾಪುರ ಗ್ರಾಮದಲ್ಲಿ ವಾಸವಾಗಿಲ್ಲದೇ ಇದ್ದರೂ ಸಹ ಅವರಿಗೆ ಮನೆ

ಮಂಜೂರು ಆಗಿರುವುದರಿಂದ, ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ರಡಿಯಲ್ಲಿ ಮನೆ ಮಂಜೂರಾತಿಗಳನ್ನು ರದ್ದು ಮಾಡಲು ಸೂಕ್ತ ಕಾನೂನಿನ ಕ್ರಮ ತೆಗೆದುಕೊಳ್ಳುವಂತೆ 5ನೇ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 27/10/17.
(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ